ಬಂದು ರಾಮಣ್ಣ ಅದ್ಯಾವ ಮಾತಂದನೋ ಏನೋ, ಸರೋಜಕ್ಕ ಒಳ ಮನೆಗೆ ಹೋದವಳೇ ಬಾಗಿಲ ಚಿಲಕ ಹಾಕಿಕೊಂಡು ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಳು. ಉರಿ ತಾಳಲಾಗದೆ ಅವಳು ಚೀರಾಡಿದಾಗಲೇ ರಾಮಣ್ಣನಿಗೆ ಎಚ್ಚರವಾದದ್ದು.

ಸರೋಜಕ್ಕ ಹೀಗೆಲ್ಲ ಮಾಡಿಕೊಳ್ಳುತ್ತಾಳೆ ಎಂದು ಅವನು ಕನಸು ಮನಸ್ಸಿನಲ್ಲೂ ಎಣಿಸಿರಲಿಲ್ಲ. ‘ಎಪ್ಪೋ ಯಾರಾದರೂ ಬರ್ರೋ... ನನ್ನ ಹೆಂಡತಿ ಉರಿ ಹಚ್ಚಿಕೊಂಡಾಳ...’ ಎಂದು ರಾಮಣ್ಣ ಕಿರುಚಿಕೊಂಡಾಗಲೇ ಅಪ್ಪ, ನೆರೆಹೊರೆಯವರು ಓಡೋಡಿ ಹೋಗಿ ಬಾಗಿಲು ಮುರಿದರು. ಸರೋಜಕ್ಕನ ಮೈಕೈ ಸುಟ್ಟು ಹೋಗಿ ಗುರುತೇ ಸಿಗದಾಗಿದ್ದಳು. ಹಾಗೂ ಹೀಗೂ ಮಾಡಿ ಮೈಗೆ ಅರಿವೆ ಸುತ್ತಿ ಆಸ್ಪತ್ರೆಗೊಯ್ದರು. ಸರೋಜಕ್ಕ ಬದುಕುಳಿಯಲಿಲ್ಲ. ರಾಮಣ್ಣ ಎದೆಯೊಡೆದು ಕುಳಿತ. ಪೊಲೀಸರು ಅವನನ್ನು ಎಳೆದೊಯ್ದು ಜೈಲಿಗೆ ಕಳಿಸಿದರು. ಅವರ ಇಬ್ಬರು ಮಕ್ಕಳು ಅನಾಥರಾದರು.



***

ಈ ಘಟನೆ ವಿಶಾಲನ ಎಳೆಯ ಮನಸ್ಸಿನ ಮೇಲೆ ಮಾಯದ ಗಾಯ ಮಾಡಿತ್ತು. ತನ್ನಪ್ಪ–ಅವ್ವ ಯಾವುದೋ ಕಾರಣಕ್ಕೆ ಜಗಳವಾಡಿದರೆ ಅವನ ಕೈಕಾಲು ನಡುಗತೊಡಗಿದವು. ಸರೋಜಕ್ಕನಂತೆ ತನ್ನವ್ವ ಬೆಂಕಿ ಹಚ್ಚಿಕೊಂಡರೆ... ಅವನೆದೆ ಢವಗುಟ್ಟುತ್ತಿತ್ತು. ಆದರೆ ಅವರ ಜಗಳ ಯಾವತ್ತೂ ತಾರಕ್ಕೇರಲಿಲ್ಲ. ತನ್ನಪ್ಪನಿಗಿಂತ ಅವ್ವ ಸಮಾಧಾನ. ಅಪ್ಪ ಅದೆಷ್ಟೇ ಕೋಪಿಸಿಕೊಂಡರೂ ಅವಳು ಎದುರಾಡದೆ, ಕಿರುಚಾಡದೆ ಒಳಗೊಳಗೆ ಕೊರಗುತ್ತ ಕೂಗಾಡಿದರೂ ಕೂಗಾಡದಂತೆ ಇದ್ದು ಅವನನ್ನೂ ಉಳಿಸಿ ತಾನೂ ಉಳಿದವಳು.

ಸರೋಜಕ್ಕನ ದಾರುಣ ಸಾವನ್ನು ಕಣ್ಣಾರೆ ಕಂಡ ಮೇಲೆ ವಿಶಾಲ ಮದುವೆಯಾಗದಿರುವುದೇ ಒಳಿತು ಎಂದುಕೊಂಡ. ಮದುವೆ ವಯಸ್ಸಿಗೆ ಬಂದಾಗಲೂ ಅವನಿಗೆ ಮದುವೆಯಾಗುವ ಮನಸ್ಸಾಗಲಿಲ್ಲ. ಮದುವೆಯಾಗದಿರುವುದರಲ್ಲಿಯೇ ಸುಖವಿದೆ ಎಂದು ಒಮ್ಮೊಮ್ಮೆ ಅವನಿಗೆ ಅನಿಸುತ್ತಲಿತ್ತು. ಆದರೆ ಅವ್ವ–ಅಪ್ಪ ಅವನ ಮಾತು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಕೊನೆಗೆ ವೈಶಾಲಿಯನ್ನು ಗಂಟು ಹಾಕಿದರು. ಮದುವೆಯಾದ ಮೇಲೆಯೇ ಇಲ್ಲದ ರಗಳೆಗಳೆಲ್ಲ ಶುರುವಾದದ್ದು. ಅಲ್ಲಿಯವರೆಗೆ ಒಳ್ಳೆಯ ಹುಡುಗ ಎನಿಸಿಕೊಂಡಿದ್ದ ವಿಶಾಲನಿಗೆ ಮದುವೆಯಾದ ಮೇಲೆಯೇ ಹೆಂಡತಿಯ ಗುಲಾಮನೆಂಬ ಪಟ್ಟ ಬಂದಿದ್ದು.

ವೈಶಾಲಿ ಕೋಪಿಸಿಕೊಂಡಾಗ, ಅವಳೊಡನೆ ವಾದಕ್ಕಿಳಿದಾಗ ಅವನಿಗೆ ಗೊತ್ತಿಲ್ಲದೆ ಕೈಕಾಲು ನಡುಗಿ, ಬಾಯಿ ಒಣಗಿ, ನಾಲಿಗೆ ಸೇದಿ, ಬವಳಿ ಬಂದ ಹಾಗೆ ಆಗತೊಡಗಿತು. ನನಗೆ ಏಕೆ ಹೀಗಾಗುತ್ತಿದೆ? ನಾನು ಪುಕ್ಕಲನೆ, ಹೇಡಿಯೇ... ಅವಳ ಜೊತೆ ಜಗಳವಾಡಲೂ ಹೆದರಿಕೆಯೇ... ಅವಳು ಕಿರುಚಾಡಿದರೂ, ಕೂಗಾಡಿದರೂ ಎದುರಾಡಲಾಗದೆ ತಡವರಿಸುವುದೇಕೆ ಎಂದು ಕೇಳಿಕೊಂಡಾಗಲೆಲ್ಲಾ ಸರೋಜಕ್ಕನ ಸಾವು ಅವನ ಕಣ್ಮುಂದೆ ಬರುತಿತ್ತು. ಅವಳ ಕಿರುಚಾಟ, ಕೂಗಾಟ, ಸುಟ್ಟು ಕರಕಲಾದ ಆ ದೇಹ ಕಣ್ಮುಂದೆ ಸುಳಿದಾಡುತ್ತಿತ್ತು. ಇದೇ ಕಾರಣಕ್ಕೆ ಏನೋ ವಿಶಾಲ, ವೈಶಾಲಿ ಒಮ್ಮೊಮ್ಮೆ ಕಾಲು ಕೆರೆದು ಜಗಳ ಕಾದರೂ ಕಾಲಿಗೆ ಬುದ್ಧಿ ಹೇಳಿ ಓಡಿ ಹೋಗುವುದು.

***

ಏನೇ ಇರಲಿ, ಸರೋಜಕ್ಕನಂತಹ ಸಾವು ಯಾರಿಗೂ ಬಾರದಿರಲಿ, ಯಾರ ಸಂಸಾರವೂ ಹಾಳಾಗದಿರಲಿ. ಈ ಜಗಳ–ಕದನಕ್ಕೆ ಕೊನೆ ಎಂಬುವುದಿರಲಿ. ಹೊಂದಾಣಿಕೆಯೇ ಬದುಕು ಎಂಬುವುದನ್ನು ಜನ ಈಗಲಾದರೂ ಅರಿಯಲಿ. ಸಂಶಯದಿಂದ ಸಂಸಾರ ಹಾಳು ಎಂಬುದನ್ನು ಮನಗಾಣಲಿ ಎಂದು ವಿಶಾಲ ತನ್ನೊಳಗೆ ಗೊಣಗುತ್ತ, ಸರೋಜಕ್ಕ ಉರಿ ಹಚ್ಚಿಕೊಂಡಾಗ ಎಷ್ಟೊಂದು ಯಾತನೆ ಅನುಭವಿಸಿರಬೇಕು, ಅದಕ್ಕೂ ಮುನ್ನ ಅವಳು ಎಷ್ಟೊಂದು ಬಾರಿ ತನ್ನನ್ನೇ ತಾನು ಸುಟ್ಟುಕೊಂಡಿರಬೇಕು ಎಂದೆಲ್ಲ ಚಿಂತಿಸುತ್ತಿರುವಾಗಲೇ ಹೈಸ್ಕೂಲಿನಲ್ಲಿ ಓದಿದ ಸತಿ ಪದ್ಧತಿ ಪಾಠ ಅವನ ನೆನಪಿಗೆ ಬಂತು.

ಆಗ ದೇಶದ ಕೆಲ ಸಮುದಾಯದಲ್ಲಿ ಸತಿ ಪದ್ಧತಿ ಚಾಲ್ತಿಯಲ್ಲಿದ್ದನ್ನು, ಗಂಡ ಸತ್ತ ವಿಧವೆ ಅವನ ಶವದೊಂದಿಗೆ ಚಿತೆಯೇರಿ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದನ್ನು, ಕೆಲವೊಮ್ಮೆ ಅಲ್ಲಿರುವ ಜನರೇ ಆ ಹೆಣ್ಣುಮಗಳನ್ನು ಬಲವಂತವಾಗಿ ಚಿತೆಗೆ ತಳ್ಳುತ್ತಿದ್ದುದನ್ನು ನೆನೆಪಿಸಿಕೊಂಡು ಅವನ ಮೈ ಜುಮ್ಮೆಂದಿತು. ಒಂದು ಹೆಣ್ಣು ಚಿತೆಗೇರುವುದನ್ನು, ಜೀವಂತವಾಗಿ ಸುಟ್ಟು ಹೋಗುವುದನ್ನು ನೋಡಿಯೂ ಅಲ್ಲಿರುವವರು ಅದ್ಹೇಗೆ ಸಹಿಸಿಕೊಂಡರು? ಅವರಲ್ಲಿ ಕರುಣೆ ಸತ್ತು ಹೋಗಿತ್ತೇ? ಮಾನವೀಯತೆ ಇಲ್ಲದಾಗಿತ್ತೆ? ಅದೆಂತಹ ಕ್ರೂರ ಮನಸ್ಸುಗಳು ಇಂತಹದನ್ನೆಲ್ಲ ಆಚರಣೆಗೆ ತಂದವು ಎಂದು ಅವನು ಚಿಂತಿತನಾದ. ಈ ಅನಿಷ್ಟ ಪದ್ಧತಿ ತೊಲಗದಿದ್ದರೆ ಅದೆಷ್ಟು ಜನ ಹೆಣ್ಣು ಮಕ್ಕಳು ಬಲಿಯಾಗುತ್ತಿದ್ದರೋ ಎಂದೆಲ್ಲ ಯೋಚಿಸಿ ಅವನ ಕೈಕಾಲು ನಡುಗಿದವು.

ಈಗಲೂ ಹೆಣ್ಣು ದಹಿಸುತ್ತಿದ್ದಾಳೆ. ದಹನವಾಗುತ್ತಿದ್ದಾಳೆ. ಆದರೆ ಅದರ ರೂಪಗಳು ಮಾತ್ರ ಬದಲಾಗಿವೆ ಎಂದು ವಿಶಾಲನಿಗೆ ಅನಿಸಿತು. ಇದೆಲ್ಲವನ್ನು ಚಿಂತಿಸುತ್ತಿದ್ದಾಗಲೇ ಅವನಿಗೆ ವೈಶಾಲಿ ನೆನಪಾಗಿ ಮನೆ ಕಡೆ ತಡಬಡಿಸಿ ಹೆಜ್ಜೆ ಹಾಕಿದ. ಈಗ ಅವನ ಮನಸ್ಸಿನಲ್ಲಿ ಭಯ ಇರಲಿಲ್ಲ, ಹೆಂಡತಿಯ ಬಗ್ಗೆ ಪ್ರೀತಿ ಉಕ್ಕಿಬರುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in